ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
Karnataka Residential Educational Institutions Society
(An Organisation of Govt. of Karnataka)

ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ನಂ.8, ಎಂ.ಎಸ್.ಬಿ.-1 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-52, ದೂರವಾಣಿ ಸಂಖ್ಯೆ: 080-22265755,
ಇ-ಮೇಲ್: ed.kreis@ka.gov.in

# ನೇಮಕಾತಿ ಆದೇಶ – " ಸ್ಟಾಫ್ ನರ್ಸ್"

**ವಿಷಯ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ವೃಂದದ **ಸ್ಟಾಫ್ ನರ್ಸ್** ಹುದ್ದೆಯ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

**ಉಲ್ಲೇಖ:** 1 : ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಆರ್(2)1084/2017-18/ಪಿ.ಎಸ್.ಸಿ,ದಿನಾಂಕ:23.06.2017.

2: ಕರ್ನಾಟಕ ಲೋಕಸೇವಾ ಆಯೋಗದ ಅಂತಿಮ ಆಯ್ಕೆಪಟ್ಟಿ ಅಧಿಸೂಚನೆ ಸಂಖ್ಯೆ: ಆರ್(2)5199/2019-20/ಪಿ.ಎಸ್.ಸಿ ದಿನಾಂಕ: 27.11.2019.

3: ಸರ್ಕಾರದ ಪತ್ರ ಸಂಖ್ಯೆ: ಸಕಇ 249 ಮೋದೇಶಾ 2020, ದಿನಾಂಕ: 07-06-2021

4: ಸರ್ಕಾರದ ಪತ್ರ ಸಂಖ್ಯೆ: ಸಕಇ 249 ಮೋದೇಶಾ 2020, ದಿನಾಂಕ: 03-07-2021

*****

**ಪ್ರಸ್ತಾವನೆ:-**

ಉಲ್ಲೇಖ (1) ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಧಿಸೂಚನೆಯಂತೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗದವರು ಪರಿಶೀಲನೆ ಮಾಡಿ ಉಲ್ಲೇಖ (2) ರಲ್ಲಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಅಂತಿಮ ಆಯ್ಕೆಪಟ್ಟಿಯ ಪ್ರಕಾರ ನೇಮಕಾತಿಗೆ ಸಂಬಂಧಿಸಿದಂತೆ, **ಜಾತಿ ಸಿಂಧುತ್ವ, ಪೋಲೀಸ್ ವರದಿ, ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಅಂಕಪಟ್ಟಿಗಳ ನೈಜತೆ ಪ್ರಮಾಣ ಪತ್ರಗಳು ಸ್ವೀಕೃತವಾಗಿರುವ ಅಭ್ಯರ್ಥಿಗಳಿಗೆ** ಈ ಮುಂದೆ ತಿಳಿಸಿರುವ ಷರತ್ತುಗಳಿಗೊಳಪಟ್ಟು, ಉಲ್ಲೇಖ (3) ಮತ್ತು (4) ರ ಸರ್ಕಾರದ ಪತ್ರಗಳಲ್ಲಿ ನೀಡಿರುವ ನಿರ್ದೇಶನದ ಮೇರೆಗೆ, ಕೌನ್ಸಿಲಿಂಗ್ ಮುಖಾಂತರ ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ ನೇಮಕಾತಿ ಆದೇಶ ನೀಡಿ, ಸ್ಥಳ ನಿಯುಕ್ತಿಗೊಳಿಸಲು ಈ ಕೆಳಕಂಡಂತೆ ಆದೇಶ.

## :: ಆದೇಶ ::

**ಸಂಖ್ಯೆ: ಕವಶಿಸಸ/ಆಡಳಿತ/ನೇ.ನೇ-ಶು.ಶೂ/ಸಿ.ಆರ್-07/2019-20.** **ದಿನಾಂಕ: 16.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ನೇರ ನೇಮಕಾತಿಯಡಿ ಆಯ್ಕೆಗೊಂಡ ಈ ಕೆಳಕಂಡ ಅಭ್ಯರ್ಥಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ವಸತಿ ಶಾಲೆಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯನುಸಾರ **ಗ್ರೂಪ್-ಸಿ** ವೃಂದದ **ಸ್ಟಾಫ್ ನರ್ಸ್** ಹುದ್ದೆಗೆ ನೇಮಕಾತಿ ಮಾಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.



8, ಎಂ.ಎಸ್.ಬಿ-1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : edkreis@rediff.com, Website : www.kreis.kar.nic.in

## ಸ್ಟಾಫ್ ನರ್ಸ್

### ವೇತನ ಶ್ರೇಣಿ ((33450-62600))

### STAFF NURSE (HK) CANDIDATES

| ಕ್ರ. ಸಂ | ರ್‍ಯಾಂಕ್ | ಅಭ್ಯರ್ಥಿಯ ಹೆಸರು (ಶ್ರೀ/ಶ್ರೀಮತಿ/ಕು.) | ನೊಂದಣಿ ಸಂಖ್ಯೆ | ಆಯ್ಕೆಯಾದ ಪ್ರವರ್ಗ | ಕೌನ್ಸಿಲಿಂಗ್‌ನಲ್ಲಿ ಆಯ್ಕೆಮಾಡಿಕೊಂಡ ವಸತಿ ಶಾಲೆ |
|---|---|---|---|---|---|
| 1 | 64 | LAXMI | 3103146 | 2A/W | 515-MDRS(Co)-SC-SINDHANOOR-SINDHANOOR RAICHUR |

**ಈ ನೇಮಕಾತಿಯು ಕೆಳಕಾಣಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

1. ಅಭ್ಯರ್ಥಿಯು ಕರ್ನಾಟಕ ಸಿವಿಲ್ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು, 1977 ರ ನಿಯಮ 18 ರನ್ವಯ ನೇಮಕಾತಿ ಆದೇಶ ಹೊರಡಿಸಿದ ದಿನಾಂಕದಿಂದ 15 ದಿವಸದೊಳಗಾಗಿ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯ ವರದಿ ಮಾಡಿಕೊಳ್ಳತಕ್ಕದ್ದು. ನಿಗಧಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನೇಮಕಾತಿ ಆದೇಶವನ್ನು ರದ್ದುಗೊಳಿಸಲಾಗುವುದು.
2. ಅಭ್ಯರ್ಥಿಯು ಸೇವೆಗೆ ಹಾಜರಾಗಿ ಭಾರತ ಸಂವಿಧಾನದ ರೀತ್ಯಾ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸುವುದು.
3. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957 ರ ನಿಯಮಗಳನ್ವಯ ಜೇಷ್ಠತೆಯನ್ನು ಪರಿಗಣಿಸಲಾಗುವುದು.
4. ಅಭ್ಯರ್ಥಿಯು ತಾನು ಒದಗಿಸಿರುವ ಮಾಹಿತಿಗಳು ಸತ್ಯವೆಂದು ಹಾಗೂ ಕರ್ನಾಟಕ ಲೋಕಸೇವಾ ಆಯೋಗದಿಂದ ಹೊರಡಿಸಲಾಗಿರುವ ಅಂತಿಮ ಆಯ್ಕೆಪಟ್ಟಿಯಲ್ಲಿನ ಜೇಷ್ಠತೆಗೆ ಬದ್ಧನಾಗಿರುವುದಾಗಿ ರೂ.100/- ಮೊತ್ತದ ಛಾಪಾ ಕಾಗದದಲ್ಲಿ Affidavit ಸಲ್ಲಿಸಿರುವಂತೆ ಈ ನೇಮಕಾತಿ ಆದೇಶವನ್ನು ನೀಡಲಾಗಿದೆ. ಒಂದು ವೇಳೆ ಒದಗಿಸಿದ ಮಾಹಿತಿಗಳು ಭವಿಷ್ಯದಲ್ಲಿ ಕೃತ್ರಿಮ ಅಥವಾ ತಪ್ಪು ಎಂದು ಕಂಡುಬಂದಲ್ಲಿ ಈ ನೇಮಕಾತಿಯನ್ನು ರದ್ದುಪಡಿಸಿ, ಕೆ.ಸಿ.ಎಸ್ (ಸಾಮಾನ್ಯ ನಿಯಮ) 1977ರ ನಿಯಮಗಳನ್ವಯ ಕ್ರಮಕೈಗೊಳ್ಳಲಾಗುವುದು. ಅಂತಹ ತಪ್ಪುಗಳಿಗೆ ಅಭ್ಯರ್ಥಿಯೇ ಸಂಪೂರ್ಣ ಹಾಗೂ ನೇರ ಹೊಣೆಗಾರರಾಗಿರುತ್ತಾರೆ.
5. ಅಭ್ಯರ್ಥಿಯು 2 ವರ್ಷಗಳ ಖಾಯಂಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು. ಈ ಖಾಯಂಪೂರ್ವ ಸೇವಾ ಅವಧಿಯು ಪೂರ್ಣಗೊಳ್ಳುವ ಒಳಗಾಗಿ ಹುದ್ದೆಗೆ ಕಾಲಕಾಲಕ್ಕೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಕಡ್ಡಾಯವಾಗಿ ತೇರ್ಗಡೆಯಾಗತಕ್ಕದ್ದು.
6. ಅಭ್ಯರ್ಥಿಯು ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು, 1977 ರನ್ವಯ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಪರೀಕ್ಷಾರ್ಥ ಸೇವಾ ಅವಧಿಗೆ ಒಳಪಟ್ಟಿರುತ್ತಾರೆ.
7. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ, ವಿದ್ಯಾರ್ಹತೆ ಬಗ್ಗೆ ಎಲ್ಲಾ ದಾಖಲಾತಿಗಳ (ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ., ಪದವಿ, ಬಿ.ಇಡಿ, ಸ್ನಾತಕೋತ್ತರ ಪದವಿ ಇತ್ಯಾದಿ) ಹಾಗೂ ಜನ್ಮ ದಿನಾಂಕ ದೃಢಪಡಿಸುವ ಬಗ್ಗೆ ದಾಖಲಾತಿಗಳ (ಎಸ್.ಎಸ್.ಎಲ್.ಸಿ. ಅಂಕಪಟ್ಟಿ) ಎರಡು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.
8. ಒಬ್ಬರಿಗಿಂತ ಹೆಚ್ಚು ಪತ್ನಿ/ಪತಿಯವರನ್ನು ಹೊಂದಿರುವುದಿಲ್ಲ ಎಂಬ ಬಗ್ಗೆ ರೂ 100/- ಮೊತ್ತದ Affidavit ಛಾಪಾ ಕಾಗದವನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲು ನೀಡುವುದು.
9. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಎಲ್ಲಾ ನಿಯಮಗಳು, ಮಾರ್ಗಸೂಚಿಗಳಿಗೆ ಕೆ.ಸಿ.ಎಸ್ ನಿಯಮಗಳಿಗೆ ಹಾಗೂ ಚಾಲ್ತಿಯಲ್ಲಿರುವ ಇತರೆ ಎಲ್ಲಾ ಸೇವಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
10. ಅಭ್ಯರ್ಥಿಯ ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳನ್ನು ನೀಡಲಾಗುವುದಿಲ್ಲ.

11. ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಉಳಿಕೆ ಮೂಲ ವೃಂದದಲ್ಲಿ ಆಯ್ಕೆಯಾದ ಹೈದರಾಬಾದ್ ಕರ್ನಾಟಕ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳ ಮನವಿಯ ಮೇರೆಗೆ ಕೌನ್ಸಿಲಿಂಗ್ ನಲ್ಲಿ ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ವಸತಿ ಶಾಲೆಗಳಲ್ಲಿ ರಿಕ್ತ ಸ್ಥಾನಗಳು ಲಭ್ಯವಿದ್ದುದರಿಂದ ಸ್ಥಳ ನಿಯುಕ್ತಿಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಹೀಗೆ ಉಳಿಕೆ ಮೂಲ ವೃಂದದಲ್ಲಿ ಆಯ್ಕೆಯಾಗಿ ಹೈದರಾಬಾದ್ ಕರ್ನಾಟಕ ವೃಂದದ ವಸತಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮುಂದಿನ ನೇರ ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ನೇರ ನೇಮಕಾತಿಯಲ್ಲಿ ಹೈದರಾಬಾದ್ ಕರ್ನಾಟಕ ವೃಂದದ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡುವ ಷರತ್ತಿಗೊಳಪಟ್ಟಿರುತ್ತದೆ.

12. ಅಭ್ಯರ್ಥಿಯು ಸರ್ಕಾರದ ಆದೇಶ ಸಂಖ್ಯೆ FD/SPL/04/PET/2005, ದಿನಾಂಕ 31.03.2006 ರಂತೆ NPS ಯೋಜನೆಗೆ ಒಳಪಟ್ಟಿರುತ್ತಾರೆ. ದಿನಾಂಕ 01.04.2006 ರ ನಂತರ ಸೇವೆಗೆ ನೇಮಕಗೊಂಡ ನೌಕರರ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಒಟ್ಟು ಮೊತ್ತವನ್ನು ಆದೇಶದನ್ವಯ ಅವರ ಪ್ರತಿ ಮಾಹೆಯ ವೇತನದಲ್ಲಿ ನಿವೃತ್ತಿ ಸೌಲಭ್ಯದ ವಂತಿಗೆಯಾಗಿ ಕಟಾಯಿಸಲಾಗುವುದು.

13. ನೇಮಕಾತಿ ಹೊಂದಿದ ಅಭ್ಯರ್ಥಿಗಳು ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರು 3 ದಿನಗಳೊಳಗಾಗಿ ಕೇಂದ್ರ ಕಛೇರಿಗೆ ವರದಿ ಕಳುಹಿಸತಕ್ಕದ್ದು. ಹಾಗೂ ನೌಕರರಿಗೆ ಮೊದಲ ತಿಂಗಳ ವೇತನ ಡ್ರಾ ಮಾಡುವ ಮೊದಲು ಕೇಂದ್ರ ಕಛೇರಿಯಿಂದ ಪ್ರಥಮ ವೇತನ ಪ್ರಮಾಣ ಪತ್ರ ಪಡೆಯತಕ್ಕದ್ದು.

ಸಿದ್ದೇಶ್ವರ ಎನ್. ಕ.ಆ.ಸೇ (ಹಿರಿಯ ಶ್ರೇಣಿ).
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ:-</u>

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
4. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
5. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
6. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
7. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
8. ಎಲ್ಲಾ ಜಿಲ್ಲಾ ಜಂಟಿ ನಿರ್ದೇಶಕರು/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ,
9. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ
10. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ಯೋಜನಾಸಮನ್ವಯಾಧಿಕಾರಿಗಳು ರವರಿಗೆ.
11. ಸಂಬಂಧಪಟ್ಟ ವಸತಿ ಶಾಲೆಯ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.
12. ಸಂಬಂಧಿಸಿದ ಅಭ್ಯರ್ಥಿಗಳಿಗೆ
13. ಕಛೇರಿ ಪ್ರತಿ.